## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ. ನಂ. 361/2016**

ಸಿ.ಡಬ್ಲ್ಯು 123
ಪಿ.ಡಬ್ಲ್ಯು 65

| | | |
|---|---|---|
| ಸಾಕ್ಷಿದಾರರ ಹೆಸರು | - | ಶಿವಲಿಂಗಪ್ಪ ಮಾಸ್ಟಮರಡಿ |
| ತಂದೆಯ ಹೆಸರು | - | ಬಸವಣ್ಣಪ್ಪ |
| ವಯಸ್ಸು | - | 69 ವರ್ಷ |
| ಉದ್ಯೋಗ | - | ನಿವೃತ್ತ ಪೊಲೀಸ್ ಅಧೀಕ್ಷಕರು |
| ವಾಸ್ತವ್ಯ | - | ಧಾರವಾಡ |

(ಇಂದು ದಿನಾಂಕ 10-08-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ - ಮಾನ್ಯ ಹಿರಿಯ ಸ.ಸ.ಅ. ರವರಿಂದ**

ನಾನು 1998 ರಿಂದ 2002 ರವರೆಗೆ ಕಾರವಾರ ನಗರ ಪೊಲೀಸ್ ಠಾಣೆಯಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯನಿರ್ವಹಿಸಿದ್ದೇನೆ.

ದಿನಾಂಕಃ 25-05-2002 ರಂದು ಮುಂದಿನ ತನಿಖೆಯನ್ನು ಚಾಸಾ 122 ರಿಂದ ಸ್ವೀಕರಿಸಿ ಕಡತವನ್ನು ಪರಿಶೀಲನೆ ಮಾಡಿದ್ದೇನೆ. ಅದೇ ದಿನ ವಿಜಯಪುರದ ಬಿ ಸಿ ಎಮ್ ಕಚೇರಿಗೆ ಭೇಟ್ಟಿ ನೀಡಿ ಪ್ರವರ್ಗ 2 ಅಡಿಯಲ್ಲಿ ಮಿಸಲಾತಿ ಪಡೆದಂತಹ 1 ರಿಂದ 20 ರ ವರೆಗಿನ ಅಭ್ಯರ್ಥಿಗಳಿಗೆ ಸಂಬಂಧಪಟ್ಟಂತಹ ಸಿಂಧುತ್ವ ನೀಡಿರುವ ಬಗ್ಗೆ ಮಾಹಿತಿಯನ್ನು ಕೋರಿರುತ್ತೇನೆ. ಕುಮಾರಿ ಸಹನಾ , ಕುಮಾರಿ ಅಜಿಮಾ, ಕುಮಾರಿ ಸಬಿನಾ , ಅಬ್ದುಲ್ ಖಾದರ್ , ತಸ್ಲಿಮ್ ಬಾನು , ಬಿಬಿ ಕೌಶರ್ , ರಜಿಯಾ ಸುಲ್ತಾನ್ ಇವರಿಗೆ ಸಂಬಂಧಪಟ್ಟಂತಹ ದಾಖಲಾತಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಪಂಚನಾಮೆ ಮಾಡಿ ಪಡೆದುಕೊಂಡಿರುತ್ತೇನೆ. ಸದರಿ ಮಹಜರವನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ 1 ರವರ ಮರು ಹೇಳಿಕೆ ಪಡೆದುಕೊಂಡಿದ್ದೇನೆ. ಚಾಸಾ 121 ರ ಹೇಳಿಕೆ ಪಡೆದುಕೊಂಡಿದ್ದೇನೆ.

ಚಾಸಾ 121 ರವರು ದಾವಣಗೇರೆ ಇಂಟರನ್ಯಾಷನಲ್ ಹೊಟೆಲ್ ಬಳಿ ಇಂಡಿಕಾ ಕಾರ ನಂ. ಕೆಎ 25/ಎಮ್ 6246 ತನ್ನ ವಶಕ್ಕೆ ಪಡೆದುಕೊಂಡು ನನ್ನ ಮುಂದೆ ಹಾಜರು ಪಡಿಸಿರುತ್ತಾರೆ. ಅದನ್ನು ಮಾಲುಪಟ್ಟಿಗೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ 75 ಮತ್ತು ಚಾಸಾ 76 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕದ 28-05-2002 ರಂದು ಚಾಸಾ 16 ರವರ ವಿಚಾರಣೆ ಮಾಡಿದಾಗ ಆರೋಪಿತರ ಕೃತ್ಯದ ಬಗ್ಗೆ ಮಾಹಿತಿವುಳ್ಳವನಾಗಿದ್ದರಿಂದ ತಾನು ನ್ಯಾಯಾಲಯದ ಮುಂದೆ ಸ್ವಇಚ್ವೆ ಹೇಳಿಕೆ ಕೊಡಲು ಸಿದ್ದನಿದ್ದೇನೆ ಎಂದು ಹೇಳಿಕೆ ನೀಡಿದ್ದಾರೆ. ಆತನನ್ನು ನ್ಯಾಯಾಲಯದ ಮುಂದೆ ಹಾಜರ ಪಡಿಸಿದ್ದೇನೆ. ಅದೇ ದಿನ ಚಾಸಾ 21 ರಿಂದ ಚಾಸಾ 25 ಮತ್ತು ಚಾಸಾ 44 ರವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ದಿನಾಂಕ 29-05-2002 ರಂದು ಚಾಸಾ 26 ರಿಂದ ಚಾಸಾ 29, ಚಾಸಾ 38 ರಿಂದ ಚಾಸಾ 41 ರವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ದಿನಾಂಕ 31-05-2002 ರಂದು ಚಾಸಾ 42, ಚಾಸಾ 43 , ಚಾಸಾ 30, ಚಾಸಾ 20 ರವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ ಮತ್ತು ಚಾಸಾ 17 ರಿಂದ ಚಾಸಾ 19 ರವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ಅದೇ ದಿನ ವಿಜಯಪುರ ಬಿ ಸಿ ಎಮ್ ಕಚೇರಿಯಿಂದ ಸಮೀರ್ , ಚಾಂದಪಾಷಾ ಸಿರಿನ್ ರವರ ಸಿಂಧುತ್ವ ಪ್ರಮಾಣ ಪತ್ರ ಹಾಗೂ ಶಾಲಾ ದಾಖಲಾತಿಯನ್ನು ನೀಡಿದ್ದನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ಮಹಮ್ಮದ್ ಸಾಬ್ ರವರ ಸಿಂಧುತ್ವ ಪ್ರಮಾಣ ಪತ್ರ ಮತ್ತು ಇನ್ನಿತರ ದಾಖಲಾತಿಯನ್ನು ಪಡೆದುಕೊಂಡಿರುತ್ತೇನೆ. ಸಿರಿನ್ , ಸಮೀರ ಚಾಂದಪಾಷಾ ರವರ ಸಿಂಧುತ್ವ ಪ್ರಮಾಣ ಪತ್ರ ಮತ್ತು ಇನ್ನಿತರ ದಾಖಲಾತಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಸಿಂಧುತ್ವ ಪ್ರಮಾಣ ಪತ್ರವನ್ನು ಕ್ರಮವಾಗಿ ನಿಪಿ-71 ರಿಂದ ನಿಪಿ-73 ಎಂದು ಗುರುತಿಸಲಾಯಿತು. ದಿನಾಂಕ 06-06-2002 ರಂದು ಧಾರವಾಡದ ಶಿಕ್ಷಕರ ತರಬೇತಿ ಸಂಸ್ಥೆಯ ಚಾಸಾ 78 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಚಾಸಾ 47 ಮತ್ತು ಚಾಸಾ 48 ರವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ಪೌಜಿಯಾ ಅಬ್ದುಲ ಶೇಖ್, ಬಿ ಬಿ ಬಟುರ್ ರವರ ಸಿಂಧುತ್ವ ಪ್ರಮಾಣ

ಪತ್ರವನ್ನು ಪಡೆದುಕೊಂಡಿದ್ದೇನೆ. ಪೌಜಿಯಾ ಅಬ್ದುಲ್ ಶೇಖ್ ಇವರಿಗೆ ಸಂಬಂಧಪಟ್ಟಂತೆ ದಾಖಲಾತಿಯನ್ನು ಗುರುತಿಸಿದ್ದು, ಅದನ್ನು ನಿಪಿ-74 ಎಂದು ಗುರುತಿಸಲಾಯಿತು. ಚಾಸಾ 117 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 17-06-2002 ರಂದು ವಿಜಯಪುರ ತಹಶೀಲ್ದಾರ ಕಚೇರಿಗೆ ಭೇಟಿ ನೀಡಿ ಚಾಸಾ 107 ರವರ ಹೇಳಿಕೆ ಪಡೆದುಕೊಂಡಿದ್ದೇನೆ.

**ಮುಂದುವರೆದ ಮುಖ್ಯ ವಿಚಾರಣೆಗೆ ಮಾನ್ಯ ಹಿರಿಯ ಸ.ಸ.ಅ. ರವರಿಂದ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು, ಕಾರವಾರ